ಸಾಕ್ಷಿಗೆ ದಿಃ 05.12.2019 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟಿ ಸವಾಲು 6 ರಿಂದ 8ನೇ ಪ್ರತಿವಾದಿ ಪರ ಶ್ರೀ ಎಂ ಎನ್ ವಕೀಲರಿಂದಃ

ದ್ವಾರಹಳ್ಳಿ ಗ್ರಾಮದ ಸ.ನಂ. 60 ರ ಸ್ವತ್ತನ್ನು ನೋಡಿದ್ದೇನೆ. ಸದರಿ ಜಮೀನನ್ನು ನನ್ನ ಸಹೋದರ ಮಲ್ಲನಗೌಡನ ಹೆಂಡತಿ ಕವಿತಾ ಪಾಟೀಲ್ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. 2012 ರಲ್ಲಿ ನನ್ನ ತಂದೆ ಒಂದು ಮರಣ ಶಾಸನ ಮಾಡಿ ನನ್ನ ಸಹೋದರರ ಚನ್ನಬಸವನಗೌಡ ಮತ್ತು ಮತ್ತೊಬ್ಬರಿಗೆ ವಿಲ್ ಬರೆದಿರುತ್ತಾರೆ ಎಂದರೆ ಸರಿ. ಆದರೆ ವಿಲ್ಲನ್ನು ವಾರಸುದಾರರ ಒಪ್ಪಿಗೆ ಇಲ್ಲದೇ ಮಾಡಿರುತ್ತಾರೆ. ಮರಣ ಶಾಸನ ಮಾಡುವಾಗ ಸಮ್ಮತಿ ಪಡೆಯುವ ಅವಶ್ಯಕತೆ ಇಲ್ಲ ಎಂದರೆ ನಮ್ಮ ತಂದೆ ಅನಾರೋಗ್ಯವಾಗಿದ್ದಾಗ ವಿಲ್ ಬರೆದಿರುತ್ತಾರೆ. ನಮ್ಮ ತಂದೆ ಉತ್ತಮ ಆರೋಗ್ಯ ಇದ್ದಾಗ ಮರಣ ಶಾಸನ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಕೂಡ ಮರಣ ಶಾಸನದಲ್ಲಿ ಬಂದ ಆಸ್ತಿಯನ್ನು ಅನುಭವಿಸುತ್ತಿದ್ದಾರೆ ಎಂದರೆ ಸರಿ. ನನ್ನ ಮತ್ತು ಉಳಿದ ಹೆಣ್ಣುಮಕ್ಕಳು ವಿವಾಹದ ಸಮಯದಲ್ಲಿ ನಮಗೆ ಒಡವೆ ಕೊಟ್ಟಿದ್ದರು ಎಂದರೆ ನಮ್ಮ ತಾತನ ಕಾಲದಲ್ಲಿ ಇದ್ದ ಒಡವೆಗಳನ್ನು ಹಂಚಿರುತ್ತಾರೆ. ತಾತನ ಕಾಲದಲ್ಲಿ 1 ಎಕರೆ ಆಸ್ತಿಯನ್ನು ಕೂಡ ಆರ್ ಸಿ ಪಾಟೀಲ್ ಹಾಳುಮಾಡಲಿಲ್ಲ ಕುಟುಂಬಕ್ಕೆ ಇರಿಸಿದ್ದರು ಎಂದರೆ ಸರಿಯಲ್ಲ. ಕುಟುಂಬದ ಆಸ್ತಿಗಳನ್ನು ಉಳಿಸಿಕೊಳ್ಳಲು ಆರ್ ಸಿ ಪಾಟೀಲ್ ಬಹಳ ಪ್ರಯತ್ನಪಟ್ಟಿದ್ದರು ಎಂದರೆ ಸರಿ. 1972 ರಲ್ಲಿಯೇ ಆರ್ ಸಿ ಪಾಟೀಲ್ ರವರು ಅವರ ಮೈನರ್ ಮಕ್ಕಳೊಂದಿಗೆ ಪಾಲು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಗೇಣಿ ಕಾಯ್ದೆ ಬಂದ ನಂತರ ಕುಟುಂಬಕ್ಕೆ ಆಸ್ತಿ ಉಳಿಸಬೇಕು ಎಂಬ ಉದ್ದೇಶದಿಂದ 1972 ರಲ್ಲಿ ಈ ರೀತಿ ಪಾಲು ವಿಭಾಗ ಮಾಡಿಕೊಂಡರು ಎಂದರೆ ಸರಿ. ಆರ್ ಸಿ ಪಾಟೀಲ್ ಜೀವಂತ ಇದ್ದಾಗ ಜನರಿಗೆ ಸಲಹೆ ಸೂಚನೆ ಕೊಡುತ್ತಿದ್ದರು, ಪಂಚಾಯತಿ ಮಾಡುತ್ತಿದ್ದರು ಎಂದರೆ ಸರಿ. ಆರ್ ಸಿ ಪಾಟೀಲ್ ಮರಣ ನಂತರ ಕುಸುಮಾ ಪಾಟೀಲ್ ರವರು ಸಮಾಜದ ಜನರಿಗೆ ಸಲಹೆ ಕೊಡುವುದನ್ನು ಮುಂದುವರಿಸಿಕೊಂಡು ಹೋಗಿದ್ದಾರೆ ಎಂದರೆ ಸರಿ. ಹಾಲು ಒಕ್ಕೂಟದಲ್ಲಿ ಕುಸುಮಾ ಪಾಟೀಲ್ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

2. ಬಿ ಎಸ್ ಲಕ್ಷ್ಮೀಕಾಂತಪ್ಪ ಗೊತ್ತು. ನನ್ನ ಸಹೋದರ ಮಲ್ಲನಗೌಡರು ಬೆಂಕಿಗೆ ಬಿದ್ದು ಅನಾಹುತ ಆಗಿ ಮರಣ ಹೊಂದಿದ್ದಾರೆ ಎಂದರೆ ಸರಿ. ಅವರು ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು ಎಂದರೆ ಸರಿ. ಆಗ 2.5 ಲಕ್ಷ ಹಣದ ಖರ್ಚು ಬಂತು ಎಂದರೆ ಸರಿ. ರಾಜೇಶ್ವರಿ ಮದುವೆ ಸಮಯದಲ್ಲಿ ನನ್ನ ಚಿಕ್ಕಮ್ಮ ಗೀತಾ ಪಾಟೀಲ್ ರವರಿಗೆ ಕುಸುಮಾ ಪಾಟೀಲ್ ರವರು 1 ಲಕ್ಷ ರೂ ಹಣ ಕೊಟ್ಟರು ಎಂದರೆ ಗೊತ್ತಿಲ್ಲ. ನನ್ನ ತಾಯಿಗೆ ಗೊತ್ತಿದೆಯೇ ಎಂದರೆ ಗೊತ್ತಿರಬಹುದು. ನನ್ನ ಸಹೋದರ ಮಲ್ಲಪ್ಪಗೌಡರ ಹೆಂಡತಿ ಹೆಸರು ಕವಿತಾ. ಮಹೇಶ್ವರಿ, ಅನುಶ್ರೀ ಮತ್ತು ಕವಿತಾ ಈಗ ಕುಸುಮಾ ಪಾಟೀಲ್ ರವರೊಂದಿಗೆ ವಾಸಿಸುತ್ತಿದ್ದಾರೆ ಎಂದರೆ ಸರಿ. ಅವರು ನನ್ನ ಸಹೋದರರ ಮಲ್ಲನಗೌಡರ ಹೆಂಡತಿ ಮತ್ತು ಮಕ್ಕಳು ಎಂದರೆ ಸರಿ. ನನ್ನ ಇನ್ನೊಬ್ಬ ಸಹೋದರ ಚನ್ನಬಸನಗೌಡರು ದ್ವಾರಹಳ್ಳಿಯಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿ. ನನ್ನ ತಾಯಿ ಮತ್ತು ಚನ್ನಬಸನಗೌಡರು ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದರೆ ಒಂದೇ ಮನೆಯಲ್ಲಿದ್ದಾರೆ. ನಾನು ಮತ್ತು ನನ್ನ ತಾಯಿ ಚನ್ನಬಸನಗೌಡ ಪ್ರತ್ಯೇಕ ವಾಸವಾಗಿದ್ದರೂ ಸಹ ಒಂದೇ ಮನೆಯಲ್ಲಿ ವಾಸವಾಗಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಲ್ಲನಗೌಡರ ಮಕ್ಕಳಿಗೆ ಕುಸುಮಾ ಪಾಟೀಲ್ ವಿದ್ಯಾಭ್ಯಾಸ ಮಾಡಿಸುತ್ತಿದ್ದಾರೆ ಎಂದರೆ ಸರಿ. ಈ ದಿನ ನನ್ನ ತಾಯಿ

ನ್ಯಾ.ಕೆ ಬಂದಿದ್ದಾರೆ ಎಂದರೆ ಸರಿ. ನ್ಯಾ.ದ ಪ್ರತಿ ಸುನಾವಣಾ/ಮುದ್ದತ್ತಿನ ದಿನಾಂಕಕ್ಕೆ ನನ್ನ ತಾಯಿ ನನ್ನೊಂದಿಗೆ ಬರುತ್ತಾರೆ ಎಂದರೆ ಸರಿ. ನನ್ನ ತಾಯಿ ಮತ್ತು ನನ್ನ ಸಹೋದರ ಚನ್ನಬಸವನಗೌಡ ಚೆನ್ನಾಗಿದ್ದಾರೆ. ಕುಸುಮಾ ಪಾಟೀಲ್ ರವರನ್ನು ಒಬ್ಬೊಂಟಿ ಮಾಡಲು ಈ ದಾವಾ ಹೂಡಿದ್ದೇನೆ ಎಂದರೆ ಸರಿಯಲ್ಲ. ಕಾಯ್ದೆ ಪ್ರಕಾರ ದಾವಾ ಆಸ್ತಿಗಳಲ್ಲಿ ಹಿಸ್ಸೆ ಪಡೆಯುವ ಹಕ್ಕು ಇಲ್ಲ ಎಂದು ಸೂಚಿಸುವುದು ಸರಿಯಲ್ಲ. ನಮ್ಮ ತಂದೆಯ ಸಹಿಯನ್ನು ನಾನು ಗುರುತಿಸಲು ಆಗುವುದಿಲ್ಲ. ಅವರಿಗೆ ಇಂಗ್ಲೀಷ್ ಬರುತ್ತಿತ್ತು ಇಂಗ್ಲೀಷ್ ಅಭ್ಯಾಸ ಇತ್ತು ಎಂದರೆ ಸರಿ.

3. ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸಿದಾಗ ಅದರಲ್ಲಿ ಕಾಣಿಸುವ ಸಹಿ ನನ್ನ ತಂದೆ ಮತ್ತು ತಾಯಿ ಸಹಿ ಎಂದು ಒಪ್ಪಿಕೊಳ್ಳುತ್ತಾರೆ. ಸದರಿ ದಾಖಲೆಯು ದಿಃ 29.04.1972 ರ ನೊಂದಾದ ವಿಭಾಗ ಪತ್ರವಾಗಿದ್ದು, ಸಾಕ್ಷಿ ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಡಿ 1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸಿದಾಗ ಅದರಲ್ಲಿ ಕಾಣಿಸುವ ಸಹಿ ನನ್ನ ತಂದೆ ಸಹಿ ಎಂದು ಒಪ್ಪಿಕೊಳ್ಳುತ್ತಾರೆ. ಸದರಿ ದಾಖಲೆಯು ದಿಃ 25.09.2006 ರ ನೊಂದಾದ ದಾನಪತ್ರ ಪತ್ರವಾಗಿದ್ದು, ಸಾಕ್ಷಿ ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಡಿ 2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸಿದಾಗ ಅದರಲ್ಲಿ ಕಾಣಿಸುವ ಸಹಿ ನನ್ನ ತಂದೆ ಸಹಿ ಎಂದು ಒಪ್ಪಿಕೊಳ್ಳುತ್ತಾರೆ. ಸದರಿ ದಾಖಲೆಯು ದಿಃ 19.11.2008 ರ ನೊಂದಾದ ಕ್ರಯ ಪತ್ರವಾಗಿದ್ದು, ಸಾಕ್ಷಿ ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಡಿ 3 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸಿದಾಗ ಅದರಲ್ಲಿ ಕಾಣಿಸುವ ಸಹಿ ನನ್ನ ತಂದೆ ಸಹಿ ಎಂದು ಒಪ್ಪಿಕೊಳ್ಳುತ್ತಾರೆ. ಸದರಿ ದಾಖಲೆಯು ದಿಃ 09.01.2012 ರ ನೊಂದಾದ ಮರಣ ಶಾಸನ ಪತ್ರವಾಗಿದ್ದು, ಸಾಕ್ಷಿ ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಡಿ 4 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸಿದಾಗ ಅದರಲ್ಲಿ ಕಾಣಿಸುವ ಸಹಿ ನನ್ನ ತಂದೆ ಸಹಿ ಎಂದು ಒಪ್ಪಿಕೊಳ್ಳುತ್ತಾರೆ. ಸದರಿ ದಾಖಲೆಯು ದಿಃ 09.01.2012 ರ ನೊಂದಾದ ದಾನ ಪತ್ರವಾಗಿದ್ದು, ಸಾಕ್ಷಿ ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಡಿ 5 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸಿದಾಗ ಅದರಲ್ಲಿ ಕಾಣಿಸುವ ಸಹಿ ನನ್ನ ತಂದೆ ಮತ್ತು ತಾಯಿ ಸಹಿ ಎಂದು ಒಪ್ಪಿಕೊಳ್ಳುತ್ತಾರೆ. ಸದರಿ ದಾಖಲೆಯು ದಿಃ 04.01.2012 ರ ನೊಂದಾದ ಕ್ರಯ ಪತ್ರದ ದೃಢೀಕೃತ ನಕಲಾಗಿದ್ದು, ಸಾಕ್ಷಿ ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಡಿ 6 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರಿದು ಈ ದಾಖಲೆಯಲ್ಲಿ ಸಹಿಯನ್ನು ನಮ್ಮ ತಂದೆಯಿಂದ ಮೋಸದಿಂದ ಪಡೆದಿದ್ದಾರೆ ಎಂದು ಹೇಳುತ್ತಾರೆ.

4. ಆರ್ ಸಿ ಪಾಟೀಲ್ ಯಾವ ವ್ಯವಹಾರಕ್ಕೂ ಒಳಗಾಗದ ವ್ಯಕ್ತಿ ಅಲ್ಲ ಎಂದು ಸೂಚಿಸುವುದು ಸರಿಯಲ್ಲ. ಆರ್ ಸಿ ಪಾಟೀಲ್ ಬಹಳ ತಿಳುವಳಿಕೆ ಉಳ್ಳ ವ್ಯಕ್ತಿ ಎಂದರೆ ಸರಿ. 6ನೇ ಪ್ರತಿವಾದಿ ಒತ್ತಡಕ್ಕೆ ಎಲ್ಲಾ ದಾಖಲೆಗಳನ್ನು ಮಾಡಿದ್ದಾರೆ. ಎಲ್ಲಾ ಖರೀದಿ ಪತ್ರಗಳು, ದಾನಪತ್ರಗಳು ಮತ್ತು ವಿಲ್ ಆರ್ ಸಿ ಪಾಟೀಲ್ ಸ್ವ ಇಚ್ಚೆಯಿಂದ ಮಾಡಿದ ದಾಖಲೆಗಳು ಎಂದರೆ ಸರಿಯಲ್ಲ. ನಿಡಿ 1 ರಿಂದ 6 ದಾಖಲೆಗಳು ಮೋಸದ ದಾಖಲೆಗಳು ಎಂದು ರದ್ಧತಿ ಕೋರಿ ಯಾವುದೇ ಕೇಸು ದಾಖಲಿಸಲಿಲ್ಲ ಎಂದರೆ ಈ ಕೇಸು ದಾಖಲಿಸಿದ್ದೇನೆ. ನಿಡಿ 1 ರಿಂದ 6 ಪತ್ರಗಳನ್ನು ಮಾಡಿದ ನಂತರ ಆರ್ ಸಿ ಪಾಟೀಲ್ ಬಹಳ ವರ್ಷ ಜೀವಂತ ಇದ್ದರು ಎಂದರೆ ಸರಿಯಲ್ಲ. ನಿಡಿ 1 ರಿಂದ 6 ರಲ್ಲಿನ ಪತ್ರಗಳಲ್ಲಿ ವಿಲೇವಾರಿ ಮಾಡಿರುವ ಆಸ್ತಿಗಳು ಅವರ ಸ್ವಂತ ಆಸ್ತಿ ಎಂದು ಸೂಚಿಸುವುದು ಸರಿಯಲ್ಲ. ಆರ್ ಸಿ ಪಾಟೀಲ್ ರವರಿಗೆ ತನ್ನ ಆಸ್ತಿ ವಿಲೇವಾರಿ ಮಾಡುವ ಹಕ್ಕಿತ್ತು ಎಂದರೆ ಸರಿಯಲ್ಲ.

(ಮುಂದುವರಿದ ಪಾಟಿ ಸವಾಲಿಗೆ 6 ರಿಂದ 8ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಕಲ್ಪಿಸಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.